1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.3371/2017

ದಿಃ 12.07.2018 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 3

ಚಾಸಾಃ 1

| | |
|---|---|
| ಹೆಸರು | ಃ ಸೋಮ್‌ಶೇಖರ್ |
| ತಂದೆಯ ಹೆಸರುಃ | ಸೋಸುಲ ಜೋಗಯ್ಯ |
| ವಯಸ್ಸು | ಃ 44 ವರ್ಷ |
| ಉದ್ಯೋಗ | ಃ ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ |
| ವಾಸ | ಃ ಬಳ್ಳಾರಿ |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ 14.11.2014 ರಿಂದ ದಿಃ 23.06.2016 ವರೆಗೆ ಮಾನ್ಯ ಮುಖ್ಯ ಮಂತ್ರಿಗಳ ಕಚೇರಿಯಲ್ಲಿ ಮುಖ್ಯ ಮಂತ್ರಿಗಳ ಪರಿಹಾರ ನಿಧಿ ಶಾಖೆಯಲ್ಲಿ ಉಪ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿದ್ದೆ. ಈ ಸಂದರ್ಭದಲ್ಲಿ ನನಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿ ಶಾಖೆಗೆ ವೈದ್ಯಕೀಯ ಚಿಕಿತ್ಸಾ ಮರುವೆಚ್ಚ ಕೋರಿ ಶ್ರೀಮತಿ ಸುಮಾ W/o ಬೋಮೋಗೌಡ ರವರು ಮುಖ್ಯ ಮಂತ್ರಿಗಳ ಜನತಾ ದರ್ಶನದಲ್ಲಿ ಕ್ಯಾನ್ಸರ್ ಚಿಕಿತ್ಸೆಗಾಗಿ 2,50,000/- ರೂ ಖರ್ಚಾಗಿದೆ ಎಂದು ಹೇಳಿ ಹಣಕಾಸಿನ ಸಹಾಯ ಕೋರಿ ಒಂದು ಅರ್ಜಿಯನ್ನು ಸಲ್ಲಿಸಿರುತ್ತರೆ. ಸದರಿ ಅರ್ಜಿಯೊಂದಿಗೆ ವೈದ್ಯಕೀಯ ಬಿಲ್, ಚುನಾವಣಾ ಗುರುತಿನ ಚೀಟಿ ಹಾಗೂ ಬಿಪಿಎಲ್ ಕಾರ್ಡ್‌ನ ಪ್ರತಿಯನ್ನು ಲಗತ್ತಿರಸಿರುತ್ತಾರೆ. ಸದರಿ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಮುಖ್ಯಮಂತ್ರಿಗಳು ರೂ 20,000/- ವನ್ನು ಪರಿಹಾರ ಧನವಾಗಿ ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಅರ್ಜಿದಾರರು ಸಲ್ಲಿಸಿದ ಬಿಲ್‌ಗಳ ನೈಜತೆ ಕುರಿತು ಬೆಂಗಳೂರಿನ ಸಾಗರ್ ಆಸ್ಪತ್ರೆಯ ಆಡಳಿತ ಅಧಿಕಾರಿಗಳಿಗೆ ಸದರಿ ದಾಖಲೆಗಳನ್ನು ಕಳುಹಿಸಿಕೊಟ್ಟಿರುತ್ತದೆ. ಅದರಂತೆ ಸದರಿ ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಆಸ್ಪತ್ರೆಯ ಆಡಳಿತಾಧಿಕಾರಿಗಳು ಅರ್ಜಿದಾರರು ಅವರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ ಹಾಗೂ ವೈದ್ಯಕೀಯ ಚಿಕಿತ್ಸೆ ನೀಡಿರುವುದಿಲ್ಲ ಎಂದು ವರದಿಯನ್ನು ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಅವರ ಆಸ್ಪತ್ರೆಯಿಂದ ನೀಡಿಲ್ಲವೆಂದು ಲಿಖಿತವಾಗಿ ತಿಳಿಸಿರುತ್ತಾರೆ ಈ ಹಿನ್ನೆಲೆಯಲ್ಲಿ ಕೂಲಂಕುಷವಾಗಿ ಪರಿಶೀಲಿಸಿದ ನಂತರ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪೊಲೀಸ್‌ರಿಗೆ ದೂರನ್ನು ನೀಡಿರುತ್ತೇವೆ. ಸಾಕ್ಷಿಯು ನೀಡಿದ ದೂರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2ಎ ಎಂದು ಗುರುತಿಸಲಾಯಿತು. ಮುಖ್ಯ ಮಂತ್ರಿಗಳ ಪರಿಹಾರ ಕೋರಿ ಸಲ್ಲಿಸಿದ ಅರ್ಜಿಯನ್ನು ನಿಪಿ.3 ಎಂದು (ನಿಪಿ.3ನ್ನು ಇದರ ಮೂಲ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಷರತ್ತಿನ ಮೇರೆಗೆ ನಿಶಾನೆಯಾಗಿ ಗುರುತಿಸಲಾಯಿತು.) ಒಳರೋಗಿಯ ಔಷಧ ಬಿಲ್‌ನ್ನು ನಿಪಿ.4 ಎಂದು(5 ಪುಟಗಳು), ಡಿಸ್ಚಾರ್ಜ್ ಸಮ್ಮರಿಯನ್ನು ನಿಪಿ.5 ಎಂದು, ಸಾಗರ್ ಆಸ್ಪತ್ರೆಗೆ ಅರ್ಜಿದಾರರು ನೀಡಿದ ವೈದ್ಯಕೀಯ ದಾಖಲೆಗಳ ನೈಜತೆ ಬಗ್ಗೆ ಅಭಿಪ್ರಾಯ ಕೋರಿ ಬರೆದ ಪತ್ರವನ್ನು ನಿಪಿ.6 ಎಂದು, ಸಾಗರ್ ಆಸ್ಪತ್ರೆಯ ಆಡಳಿತಾದಾರರು ನೀಡಿರುವ ಉತ್ತರವನ್ನು ನಿಪಿ.7 ಎಂದು ಗುರುತಿಸಲಾಯಿತು. ಪರಿಹಾರಕ್ಕೆ ಸಂಬಂಧಪಟ್ಟ ಕಡತದ ನೋಟ್ ಶೀಟ್‌ನ್ನು ನಿಪಿ.8 ಎಂದು ಗುರುತಿಸಲಾಯಿತು.

(ಕೋರಿಕೆಯ ಮೇರೆಗೆ ಪಾಟಿ ಸವಾಲಿಗೆಂದು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯೂಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ